ಆ) ಸದರಿ ಅಧಿಕಾರಿಯವರು ಕಛೇರಿಯ ಅವಧಿಯಲ್ಲಿ ಕೆಲಸ ನಿರ್ವಹಿಸದೇ ದಿನ ನಿತ್ಯ ಸಂಜೆ 6 ಗಂಟೆ 7 ಗಂಟೆಗಳಿಗೆ ಕಛೇರಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಅಧಿಕಾರಿಯು ಸಂಜೆ 6 ಗಂಟೆಗೆ ಕಛೇರಿಗೆ ಬಂದು ಸಿಬ್ಬಂದಿಯವರನ್ನು ಕಛೇರಿ ಅವಧಿ ಮುಗಿದಿದ್ದರೂ ಕಛೇರಿಯಿಂದ ಹೋಗದೇ ದಿನ ನಿತ್ಯ 10–11 ಗಂಟೆಯವರೆಗೆ ನಿರ್ಬಂಧಿಸಲು ಕಾನೂನಿನಲ್ಲಿ ಅವಕಾಶವಿದೆಯೇ;

ಈ) ಇವರ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಹಾಗೂ ಕಿರುಕುಳ ಕೊಡುತ್ತಿರುವುದರ ಬಗ್ಗೆ ಮೇಲಾಧಿಕಾರಿಗಳಿಗೆ ಸಾಕಷ್ಟು ಬಾರಿ ಸಿಬ್ಬಂದಿಯವರು ದೂರು ನೀಡಿದ್ದಾಗ್ಯೂ ಇದುವರೆಗೂ ಇವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ದಿನಾಂಕ: 24.08.2004 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಬಂದಿಲ್ಲ.

ಇ) ಅವಕಾಶವಿಲ್ಲ.

ಈ) ಯಾವುದೇ ದೂರು ಬಂದಿರುವುದಿಲ್ಲ.

3530 (4331) (ಕಾಲಾವಕಾಶ ತೆಗೆದುಕೊಂಡ ಪ್ರಶ್ನೆ) – ಶ್ರೀ ಬಸಣ್ಣೆಪ್ಪ ಜಿ. ಎಂ.ಎಲ್.ಎ (ಹೊಳೆಹೊಮ್ಮರಾ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–2005 ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಬಿದ್ದಿರುವ ಮಳೆ ಪ್ರಮಾಣದ ಸರಾಸರಿ ಎಷ್ಟು ?

ಆ) ಮಳೆಗಾಲದಲ್ಲಿ ನಗರದಲ್ಲಿರುವ ಕೆಳ ಹಂತದ ಬಡಾವಣೆಗಳಲ್ಲಿ ನೀರು ಪ್ರವಾಹದ ಹಾಗೆ ಬಂದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಯಾವ ಯಾವ ಬಡಾವಣೆಗಳಲ್ಲಿ ನೀರು ನಿಂತಿರುವ ಪ್ರಸಂಗಗಳು ಎದುರಾಗಿರುತ್ತವೆ ;

ಈ) ಇದರಿಂದಾಗಿ ಜೀವ ಹಾಗೂ ಆಸ್ತಿ ಹಾನಿ ಅಂದಾಜು ವಿವರಗಳನ್ನು ನೀಡುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ವರ್ಷ	ವರ್ಷದ ಮಳೆಯ ಪ್ರಮಾಣ	ಮಳೆಯ ಸರಾಸರಿ ಪ್ರಮಾಣ
2000	1217.7	101.47
2001	1058.5	88.20
2002	767.7	63.97
2003	726.8	60.56
2004	1145.1	95.42
2005	357.9 (ಜೂನ್‌ವರೆಗೆ)	29.82

ಆ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕೆಲವು ಕೆಳ ಹಂತದ ಬಡಾವಣೆಗಳಲ್ಲಿ ನೀರು ನಿಂತಿರುವ ಬಗ್ಗೆ ವರದಿ ಬಂದಿರುತ್ತದೆ.

ಇ) ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಹಂತದ ಪ್ರದೇಶಗಳಲ್ಲಿ ನೀರು ನಿಂತಿರುವ ಪ್ರಸಂಗಗಳಿರುತ್ತವೆ;

1. ವಾರ್ಡ್–69, ರಾಜೇಂದ್ರನಗರ ಸ್ಲಮ್
2. ವಾರ್ಡ್–69, ಲಕ್ಷ್ಮಣರಾವ್ ಸ್ಲಮ್
3. ವಾರ್ಡ್–71, ಜಯರಾಜ್‌ನಗರ
4. ವಾರ್ಡ್–76, ರುದ್ರಪ್ಪ ಗಾರ್ಡನ್
5. ವಾರ್ಡ್–70, ವಿನಾಯಕನಗರ
6. ವಾರ್ಡ್– ತಿಮ್ಮಯ್ಯ ಗಾರ್ಡನ್
7. ವಾರ್ಡ್–73, ಮುರುಗೇಶಪಾಳ್ಯ
8. ಜೀವನಭೀಮಾನಗರ ಮುಖ್ಯರಸ್ತೆ
9. ವಾರ್ಡ್–91, ಗಾಂಧಿಗ್ರಾಮ, ಐ.ಟಿ.ಐ. ಬಡಾವಣೆ, ಸ್ಕೀಫಾನ್ ರಸ್ತೆ
10. ವಾರ್ಡ್–92, ಚಿನ್ನಪ್ಪ ಗಾರ್ಡನ್ ಪ್ರದೇಶ
11. ವಾರ್ಡ್–93, ದೊಡ್ಡಣ್ಣನಗರ
12. ವಾರ್ಡ್–97, ತಿಮ್ಮಯ್ಯ ಗಾರ್ಡನ್
13. ಚಾಮುಂಡಿನಗರ, ಭುವನೇಶ್ವರಿನಗರ, ಸಿ.ಐ.ಎಲ್.ಬಡಾವಣೆ

14. ವಾರ್ಡ್–39, ನಾಯಂಡಹಳ್ಳಿ, ರೈಲ್ವೆ ಹಳಿ ಪಕ್ಕದಲ್ಲಿರುವ ಆಶ್ರಮದ ಬಳಿ.
15. ವಾರ್ಡ್–41, ನರಸಿಂಹಯ್ಯ ಕಾಲೋನಿ, ಫ್ಲವರ್ ಗಾರ್ಡನ್, ರಂಗನಾಥ ಕಾಲೋನಿ, ಸಂಜಯನಗರ ಕೊಳಚೆ ಪ್ರದೇಶ.
16. ವಾರ್ಡ್–42, ಹೊಸಗುಡ್ಡದಹಳ್ಳಿ ಪ್ರದೇಶ, ನೆಹರು ರಸ್ತೆ ಹಾಗೂ ಶಾಮಣ್ಣ ಗಾರ್ಡನ್, 1ನೇ ಮುಖ್ಯರಸ್ತೆ.
17. ವಾರ್ಡ್–57, 6ನೇ ಹಂತ, ಜೆ.ಪಿ.ನಗರ
18. ವಾರ್ಡ್–58, ಮಾದೇನಹಳ್ಳಿ ಟ್ಯಾಂಕ್‌ಬಂಡ್ ಪ್ರದೇಶ
19. ವಾರ್ಡ್–60, ಎಲ್.ಐ.ಸಿ. ಬಡಾವಣೆ
20. ವಾರ್ಡ್–62, ಬಿ.ಟಿ.ಎಸ್. ರಸ್ತೆ, ವಿಲ್ಸನ್ ಗಾರ್ಡನ್,
21. ವಾರ್ಡ್–63, ಬಾಲಾಜಿನಗರ
22. ವಾರ್ಡ್–65, ಡಾಲರ್ ಸಿಲ್ಕ್, ಬಿಟಿಎಂ ಬಡಾವಣೆ
23. ಹೆಚ್.ಎಂ.ಟಿ. ಬಡಾವಣೆ, ಜಾಲಹಳ್ಳಿ, ಯಶವಂತಪುರ
24. ವಾರ್ಡ್–04, ಜಯರಾಮ್ ಮತ್ತು ಸಂಜೀವಪ್ಪ ರವರುಗಳ ಗುಡಿಸಲು ಪ್ರದೇಶ
25. ವಾರ್ಡ್–23, ಪ್ರಕಾಶನಗರ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಿದ್ದಿರುವ ಮಳೆಗಾಳಿಗೆ ಜೀವ ಹಗೂ ಆಸ್ತಿ ಹಾನಿಯಾಗಿದ್ದು, ಅವರ ಕುಟುಂಬದವರಿಗೆ ಪರಿಹಾರ ನೀಡಿರುವ ವಿಷಯಗಳು

ವರ್ಷ	ಜೀವ ಹಾನಿ	ಪರಿಹಾರ	ಆಸ್ತಿಹಾನಿ	ಹಾನಿಯ ಪ್ರಕರಣಗಳು	ಪರಿಹಾರ ಅಂದಾಜು	ಮೊತ್ತ
2000–01	**0**	**0**	**88**	**131500**	**59250**	
2001–02	**2**	**100000**	**106**	**229980**	**66800**	
2002–03	**7**	**265500**	**147**	**1084000**	**311500**	
2003–04	**1**	**50000**	**2450**	**2519600**	**1402200**	
2004–05	**6**	**370000**	**338**	**3885290**	**832600**	
ಒಟ್ಟು	16	785500	3129	7850370	2672350	